ಆಹಾರವನ್ನು ಹುಡುಕುವ ಕರಡಿ ದೂರದ ಯಾವ ಚಟುವಟಿಕೆಯನ್ನೂ ಶಬ್ದ ಕೇಳದ ವಿನಃ ಗಮನಿಸಲು ಹೋಗುವುದಿಲ್ಲ. ಕರಡಿಯ ಶಕ್ತಿ ಇರುವುದೇ ಅದರ ವಾಸನಾ ಗ್ರಹಣ ಸಾಮರ್ಥ್ಯದಲ್ಲಿ.

ಪೊದೆಯ ಒಳಗೆ, ಮಣ್ಣು ದಿಬ್ಬದ ಹಿಂದೆ, ಒಣಗಿದ ಎಲೆಗಳ ನಡುವೆ ಕುಳಿತ ಹುಲಿ, ಚಿರತೆಗಳು ಅನೇಕ ಪ್ರಾಣಿಗಳಿಗೆ ಕಾಣಿಸುವುದೇ ಇಲ್ಲ. ಏಕೆಂದರೆ ಕೆಲ ಪ್ರಾಣಿಗಳ ದೃಷ್ಟಿಯೇ ಮಂದ. ತೀರಾ ಹತ್ತಿರ ಆಕೃತಿ ಬಂದರಷ್ಟೇ ನೋಡಲು ಸಾಧ್ಯವಿರುವ ಇಂಥ ಜೀವಿಗಳು ಶಬ್ದ ಮತ್ತು ವಾಸನೆಯ ಭಾಷೆಯ ಮೇಲೆಯೇ ಹೆಚ್ಚು ಅವಲಂಬಿತವಾಗಿವೆ. ಹುಲಿ, ಚಿರತೆ, ಕಾಡುನಾಯಿಗಳ ಮೈಬಣ್ಣವು ಕಾಡಿನ ಹುಲ್ಲಿನ, ಎಲೆಯ, ಮಣ್ಣಿನ ಬಣ್ಣವು ಪರಸ್ಪರ ಕೂಡಿಕೊಂಡು ಸ್ಪಷ್ಟ ಚಿತ್ರಣವೇ ಅಸಲಿಗೆ ಸಿಗುವುದಿಲ್ಲ. ಪ್ರಕೃತಿ ಅನೇಕ ಪ್ರಾಣಿ, ಪಕ್ಷಿ, ಉರಗ, ಕೀಟಗಳಿಗೆ ನಿಸರ್ಗದ ಜೊತೆ ಹೀಗೆ ಮಿಳಿತವಾಗಿ ಛದ್ಮವೇಷಧಾರಿಯಾಗುವ ಉಚಿತ ಉಡುಗೊರೆಯನ್ನು ಕೊಟ್ಟೇ ಕಾಪಾಡಿಕೊಂಡಿದೆ.

ಈ ಕಾಡಿನ ಭಾಷೆ ನಾವು ಅರಿಯಬೇಕಾದರೆ ನಮ್ಮ ಕಿವಿಗಳು ಸದಾ ಚುರುಕಾಗಿರಬೇಕು. ಕಣ್ಣು ತೀಕ್ಷ್ಣವಾಗಿರಬೇಕು. ಮೂಗು ಪ್ರಬಲವಾಗಿರಬೇಕು. ಏನೂ ಇಲ್ಲ ಎಂದುಕೊಂಡ ಜಾಗದಲ್ಲೇ ಏನಾದರೂ ಒಂದು ಜೀವ ಇದ್ದೇ ಇರುತ್ತದೆ. ಸೂಕ್ಷ್ಮವಾಗಿ ಗಮನಿಸದಿದ್ದರೆ ಕಾಡಿನಲ್ಲಿ ಸ್ಯಾಚೂ ಸ್ಥಿತಿಯಲ್ಲಿ ಕೂತಿರುವ ಯಾವ ಜೀವಿಯೂ ಕಾಣುವುದಿಲ್ಲ. ಹುಲಿ, ಚಿರತೆಗಳು ಕೂಡ ಕಾಡಿನಲ್ಲಿ ಅತ್ತಿಂದಿತ್ತ ಓಡಾಡುವಾಗ ಗೊತ್ತಾಗುತ್ತವೆಯೇ ಹೊರತು ಅವು ಅಡಗಿ ಗಪ್‌ಚಿಪ್ಪಾಗಿ ಕುಳಿತರೆ ತಿಪ್ಪರಲಾಗ ಹಾಕಿದರೂ ಗುರುತಿಸಲು ನಮ್ಮಿಂದಾಗುವುದಿಲ್ಲ.

ನಮ್ಮ ಇರುವಿಕೆ ಗೊತ್ತಾದ ನಂತರ ಕಾಡುಪ್ರಾಣಿಗಳ ಸಹಜ ನಡವಳಿಕೆಯಲ್ಲಿ ಖಂಡಿತಾ ಬದಲಾವಣೆ ಬಂದೇ ಬರುತ್ತದೆ. ಅವು ನಮ್ಮ ಸಾಮೀಪ್ಯದ ಕಾರಣಕ್ಕೆ ವ್ಯಗ್ರವಾಗುವ, ಇಲ್ಲವೇ ಅಂಜಿಕೆಯಿಂದ ಹಿಂಜರಿಯುವ, ಭಯಗೊಳ್ಳುವ ಸಂದರ್ಭಗಳೇ ಹೆಚ್ಚು. ನಮ್ಮ ಇರುವಿಕೆ ಅವಕ್ಕೆ ತಿಳಿಯದೇ ಹೋದಾಗ ಪ್ರಾಣಿ-ಪಕ್ಷಿಗಳ ನಡವಳಿಕೆ ತುಂಬಾ ಸಹಜ ಸ್ಥಿತಿಯಲ್ಲಿರುತ್ತದೆ. ಆಗ ಅವು ಯಾವ ಸಂಕೋಚವೂ ಇಲ್ಲದೆ ತಮ್ಮ ಎಂದಿನ ನ್ಯಾಚುರಲ್ ಬಿಹೇವಿಯರ್

ಮೂಡಿನಲ್ಲಿ ನಡೆದುಕೊಳ್ಳುತ್ತವೆ. ಈ ಬಗೆಯ ನಿಸರ್ಗ ಸಹಜ ನಡವಳಿಕೆ ನೋಡುವ ಅವಕಾಶ ಸಫಾರಿ ಪಟಗಾರರಿಗೆ ಎಂದಿಗೂ ಸಿಗುವುದಿಲ್ಲ.

ಪ್ರತಿದಿನ ಜನಗಳ ಓಡಾಟವನ್ನು, ವಾಹನಗಳ ಅಲೆದಾಟವನ್ನು ನೋಡಿ ಅಭ್ಯಾಸವಾಗಿರುವ ಕಾಡಿನ ಅನೇಕ ಪ್ರಾಣಿಗಳು ನಾಚಿಕೆ ಮತ್ತು ಸಂಕೋಚದ ಸ್ವಭಾವವನ್ನು ಕೊಂಚಮಟ್ಟಿಗೆ ಕಳೆದುಕೊಂಡಿವೆ. ಹೀಗಾಗಿ ಯಾವ ಮುಜುಗರವೂ ಇಲ್ಲದೆ ಜನರ ಎದುರಿಗೆ ಪ್ರಾಣಿಗಳ ಶಿಕಾರಿ ಮಾಡುವ, ಹೊಂಚು ಹಾಕಿ ಕೂರುವ, ಶಬ್ದವಿಲ್ಲದೆ ತೆವಳುತ್ತಾ ಸಾಗುವ ಎಲ್ಲ ಸಾಹಸಗಳನ್ನು ಚಿರತೆ ಮತ್ತು ಹುಲಿಗಳು ಮನುಷ್ಯನ ಸಾಮೀಪ್ಯದಲ್ಲೂ ಮುಂದುವರಿಸಿವೆ. ಇವುಗಳ ನಿಸರ್ಗ ಸಹಜ ಶಬ್ದ, ವಾಸನೆ, ನೋಟಗಳಂಥ ಭಾಷೆಯ ನಡುವೆ ಮನುಷ್ಯನ ವಾಹನ, ಹೊಗೆ, ಕೂಗಾಟ, ಅಬ್ಬರ, ಹಾರಾಟಗಳ ಭಾಷೆಯೂ ಮಿಳಿತವಾಗಿದೆ. ಈಗ ನಾನು ಮೊದಲು ನೋಡಿದ ಗಾಯಗೊಂಡ ಜಿಂಕೆ ಒಂಟಿಯಾಗಿ ಕುಂಟುತ್ತಾ ಸೂರ್ಯ ಮುಳುಗುವ ದಿಕ್ಕಿನ ಕಡೆ ಸಾಗುತ್ತಿದೆ. ಇದರ ರಕ್ತದ ವಾಸನೆಯ ಜಾಡು ಹಿಡಿದು ಬಂದ ಶಿಕಾರಿಗಳು ಕತ್ತಲಾಗುವುದನ್ನೇ ಕಾಯುತ್ತಿವೆ, ನಾವು ಹುಡುಕುತ್ತಿರುವ ತಾಯಿ ಚಿರತೆಯೂ ಕೂಡ ನಮ್ಮ ನಿರ್ಗಮನಕ್ಕೆ ಕಾಯುತ್ತಿದ್ದಾಳೆ. ನಂತರದಲ್ಲೇ ಈ ಕಾಡಿನ ಶಬ್ದ, ವಾಸನೆ, ನೋಟಗಳ ಭಾಷೆ ಯುದ್ಧರೂಪದಲ್ಲಿ ಶುರುವಾಗಲಿದೆ. ●